# ಉಪವಿಭಾಗಾಧಿಕಾರಿಗಳ ನ್ಯಾಯಾಲಯ, ಪುತ್ತೂರು ಉಪವಿಭಾಗ , ಪುತ್ತೂರು

**ಪ್ರಕರಣದ ಸಂಖ್ಯೆ:ಎಡಿಸ್ ಆರ್.ಇ.ವಿ.ಎಸ್.ಆರ್: 03/15-16.**

**ದಿನಾಂಕ : 25-10- 2016.**

**ಉಪಸ್ಥಿತರು :** ಡಾ. ರಾಜೇಂದ್ರ ಕೆ.ವಿ, ಭಾ.ಆ.ಸೇ.

ಉಪವಿಭಾಗಾಧಿಕಾರಿ

ಪುತ್ತೂರು ಉಪವಿಭಾಗ ಪುತ್ತೂರು

| ಮೇಲ್ಮನವಿದಾರರು | | ಪ್ರತಿವಾದಿಯವರು |
|---|---|---|
| ಪಿ. ಬೇಬಿ ಗೌಡ, | | ತಹಶೀಲ್ದಾರರು, |
| ಬಿನ್.ಚಂದಪ್ಪ ಗೌಡ, | | ಬೆಳ್ತಂಗಡಿ ತಾಲೂಕು ದ.ಕ. |
| ಆದ್ರುಪೆರಾಲು ಶ್ರೀ ದುರ್ಗ ನಿಲಯ ಮನೆ | -ಮತ್ತು- | |
| ಕೊಯ್ಯೂರು ಗ್ರಾಮ, | | |
| ಬೆಳ್ತಂಗಡಿ ತಾಲೂಕು ದ.ಕ | | |
| (ನ್ಯಾಯವಾದಿ ಶ್ರೀ ಶ್ರೀನಿವಾಸ ಗೌಡ ಎ ) | | |

ಪ್ರಸ್ತಾವನೆ

ಮೇಲ್ಮನವಿದಾರರು ಈ ಮೇಲ್ಮನವಿಯನ್ನು ಕರ್ನಾಟಕ ಭೂಕಂದಾಯ ಅಧಿನಿಯಮ 1964 ರ ಕಲಂ 49 ರ ಮೇರೆಗೆ ಬೆಳ್ತಂಗಡಿ ತಾಲೂಕು ಕೊಯ್ಯೂರು ಗ್ರಾಮದ ಎನ್.ಸಿ.ಆರ್.ಸಿ.ಆರ್ 221/98-99 ರಂತೆ ತಹಶೀಲ್ದಾರರು ನೀಡಿದ ಹಿಂಬರಹ ಪ್ರಶ್ನಿಸಿ ಈ ಮೇಲ್ಮನವಿಯನ್ನು ಸಲ್ಲಿಸಿರುವುದಾಗಿದೆ.

ಮೇಲ್ಮನವಿದಾರರು ಈ ಮೇಲ್ಮನವಿಯಲ್ಲಿ ಬೆಳ್ತಂಗಡಿ ತಾಲೂಕು ಕೊಯ್ಯೂರು ಗ್ರಾಮದ ಸ.ನಂ. 60/1ಪಿ2 ಪೈಕಿ 2.00 ಎಕ್ರೆ ಸರಕಾರಿ ಜಮೀನನ್ನು ಅನಧಿಕೃತವಾಗಿ ಸ್ವಾಧೀನ ಪಡಿಸಿಕೊಂಡು ಸ್ಥಳದಲ್ಲಿ ತೆಂಗು ಗೇರು ರಬ್ಬರು ಇತ್ಯಾದಿಗಳನ್ನು ಬೆಳೆಸಿಕೊಂಡು ಕಳೆದ 30 ವರ್ಷಗಳಿಂದ ಸ್ವಾಧೀನ ಹೊಂದಿರುವುದಾಗಿಯೂ, ಈ ಅತಿಕ್ರಮಣ ಸಕ್ರಮೀಕರಿಸುವಂತೆ ಕೋರಿ ನಮೂನೆ-53ರಂತೆ ಅರ್ಜಿಯನ್ನು ಬೆಲ್ತಂಗಡಿ ತಹಸೀಲ್ದಾರರಿಗೆ ಸಲ್ಲಿಸಿರುವುದಾಗಿದೆ. ಈ ಅರ್ಜಿಯ ಬಗ್ಗೆ ತಹಸೀಲ್ದಾರರು ಅಳತೆ, ನೈಜ ಪರಿಶೀಲನೆಗಳನ್ನು ಮಾಡದೆ ಸಮಿತಿಗೂ ಮಂಡಿಸದೆ ನೇರವಾಗಿ ವಿರಳ ಕೃತಾವಳಿ ' ಇರುವುದರಿಂದ ' ಎಂಬ ಕಾರನ ನೀಡಿ ಅರ್ಜಿಯನ್ನು ತಿರಸ್ಕರಿಸಿ, ಹಿಂಬರಹ ನೀಡಿರುತ್ತಾರೆ. ಈ ಹಿಂಬರಹದಿಂದ ಬಾಧಿತರಾದ ಮೇಲ್ಮನವಿದಾರರು ಈ ಪ್ರಾಧಿಕಾರಕ್ಕೆ ಮೇಲ್ಮನವಿ ಸಲ್ಲಿಸಿರುವುದಾಗಿದೆ. ಮೇಲ್ಮನವಿದಾರರು ವಿಳಂಬ ವಿನಾಯ್ತಿಗಾಗಿ ಕರ್ನಾಟಕ ಭೂಕಂದಾಯ ಅಧಿನಿಯಮ 1964ರ ಕಲಂ 52 ಹಾಗೂ ಕಾಲಮಿತಿ ಕಾಯ್ದೆ ಕಲಂ 5 ರಂತೆ ಅರ್ಜಿ ಸಲ್ಲಿಸಿರುತ್ತಾರೆ.

ಸದ್ರಿ ಮೇಲ್ಮನವಿಯನ್ನು ಪರೀಶೀಲಿಸಿ ವಿಚಾರಣೆಗೆ ಒಪ್ಪಿ ಮೇಲ್ಮನವಿದಾರರಿಗೆ ಮತ್ತು ಪ್ರತಿವಾದಿಯವರಿಗೆ ವಿಚಾರಣೆಗೆ ದಿನಾಂಕ : 26-05-2015 ರಂದು ಹಾಜರಾಗುವಂತೆ ನೋಟೀಸು ನೀಡಿ ಈ ದಿನ ವಿಚಾರಣೆ ಆರಂಭಿಸಿ ಯುಕ್ತ ಕಾಲವಕಾಶ ನೀಡಿ ದಿನಾಂಕ : 30-06-2015 ರಂದು ವಿಚಾರಣೆ ಕೈಗೆತ್ತಿಕೊಂಡು ಆದೇಶಕ್ಕೆ ಕಾಯ್ದಿರಿಸಲಾಯಿತು.

ಸದ್ರಿ ಪ್ರಕರಣದ ವಿಚಾರಣೆ ಸಮಯ ಪ್ರತಿವಾದಿಯವರು ಹಾಜರಾಗಿರುವುದಿಲ್ಲ. ಮೇಲ್ಮನವಿಯ ಪರ ನ್ಯಾಯವಾದಿಯವರು ಹಾಜರಾಗಿ ಮೇಲ್ಮನವಿಯ ಅಂಶವನ್ನೇ ಪುನರುಚ್ಛರಿಸುತ್ತಾ ಮೇಲ್ಮನವಿದಾರರು ' ವಿರಳ ಕೃತಾವಳಿ ಇರುವುದರಿಂದ ' ಎಂಬುದಾಗಿ ಅರ್ಜಿ ತಿರಸ್ಕರಿಸಿ ನೀಡಿದ ಹಿಂಬರಹ ಕಾನೂನು ಸಮ್ಮತವಲ್ಲ. ಇದು ಯಾವುದೇ ತನಿಖೆ ನಡೆಸದೆ ನೀಡಿರುವುದಾಗಿದೆ. ಜಮೀನು ಮೇಲ್ಮನವಿದಾರರ ಸ್ವಾಧೀನವಿದೆ. ಮೇಲ್ಮನವಿದಾರರಿಗೆ ಈ ಹಿಂಬರಹದ ಬಗ್ಗೆ ದಿನಾಂಕ 17-10-2014ರಂದು ತಿಳಿದಿರುತ್ತದೆ. ಆದುದರಿಂದ ಬೆಳ್ತಂಗಡಿ ತಹಸೀಲ್ದಾರರ ಹಿಂಬರಹ ಯನ್.ಸಿ.ಆರ್ ಎಸ್ ಆರ್ 221/98-99ನ್ನು ಬದಿಗೊತ್ತಿ ತನಿಖೆಯಿಂದ ಅಕ್ರಮಣ ಜಮೀನನ್ನು ಮಂಜೂರು ಮಾಡುವಂತೆ ಕೋರಿ ವಾದ ಮಂಡಿಸುತ್ತಾರೆ. ಕೋರಿ ವಾದ ಮಂಡಿಸುತ್ತಾರೆ.

ಮೇಲಿನ ಎಲ್ಲಾ ಅಂಶಗಳನ್ನು ದಾಖಲೆಗಳನ್ನು ಪರಿಶೀಲಿಸಿದಾಗ ತಹಸೀಲ್ದಾರರು ತಮ್ಮ ಹಿಂಬರಹದಲ್ಲಿ ' ವಿರಳ ಕೃತಾವಳಿ ಇರುವುದರಿಂದ ' ಎಂದು ತಿಳಿಸಿ ನಮೂನೆ - 53ರ ಅರ್ಜಿ ತಿರಸ್ಕರಿಸಿರುತ್ತಾರೆ. ಆದರೆ ಮೇಲ್ಮನವಿದಾರರ ಈ ಜಮೀನು 30 ವರ್ಷಗಳಿಂದ ಸ್ವಾಧೀನವಿದ್ದು, ಸ್ಥಳದಲ್ಲಿ ತೆಂಗು, ಗೇರು, ರಬ್ಬರ್ ಕೃಷಿ ಮಾಡಿಕೊಂಡು ವಾಸದ ಮನೆ ಕಟ್ಟಿಕೊಂಡು ವಾಸ ಇರುವುದಾಗಿ ವಿಚಾರಣೆ ಸಮಯ ತಿಳಿಸಿರುತ್ತಾರೆ. ಹಾಗೂ ಕೃತಾವಳಿಗಳ ಬಗ್ಗೆ ಫೋಟೋಗಳನ್ನು ಹಾಜರುಪಡಿಸಿರುತ್ತಾರೆ. ಈ ಎಲ್ಲಾ ಅಂಶಗಳನ್ನು ಪರಿಗಣಿಸಿಕೊಂಡು ಈ ಕೆಳಗಿನಂತೆ ಆದೇಶಿಸಿದೆ.

**ಆದೇಶ.**

ಮೇಲ್ಮನವಿಯನ್ನು ಪುರಸ್ಕರಿಸಿದೆ.

ಬೆಳ್ತಂಗಡಿ ತಹಸೀಲ್ದಾರರ ಪ್ರಶ್ನಿತ ಹಿಂಬರಹ ಸಂಖ್ಯೆ ಯನ್.ಸಿ.ಆರ್ ಎಸ್ ಆರ್ 221/98-99 ದಿನಾಂಕ 28-7-2013ರನ್ನು ರದ್ದುಗೊಳಿಸಿ ಬೆಳ್ತಂಗಡಿ ತಾಲೂಕು ಕೊಯ್ಯೂರು ಗ್ರಾಮದ ಎನ್.ಸಿ.ಆರ್.ಸಿ.ಆರ್ 221/98-99 ರಂತೆ ದಾಖಲಾದ ಮೆಲ್ಮನವಿದಾರರ ನಮೂನೆ-53ರ ಅರ್ಜಿಯನ್ನು ನಿಯಮಾನುಸಾರ ಮರು ತನಿಖೆ ನಡೆಸಿ ಸೂಕ್ತ ಕ್ರಮ ಜರಗಿಸಲು ಬೆಳ್ತಂಗಡಿ ತಹಶೀಲ್ದಾರರಿಗೆ ಆದೇಶಿಸಿದೆ.

ಈ ಆದೇಶವನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ಕೊಟ್ಟು ಬೆರಳಚ್ಚುಪಡಿಸಿ, ಪರಿಷ್ಕರಿಸಿ ಈ ದಿನ ದಿನಾಂಕ : 25-10-2016 ರಂದು ಬಹಿರಂಗ ನ್ಯಾಯಾಲಯದಲ್ಲಿ ಉದ್ಘೋಷಿಸಲಾಯಿತು.

ಡಾ.ರಾಜೇಂದ್ರ ಕೆ.ವಿ, ಐ.ಎ.ಎಸ್.

ಸಹಾಯಕ ಆಯುಕ್ತರು,

ಪುತ್ತೂರು ಉಪವಿಭಾಗ, ಪುತ್ತೂರು ದ.ಕ

ಪ್ರತಿ: ಮೇಲ್ಮನವಿದಾರರ ಪರ ನ್ಯಾಯವಾದಿ ಶ್ರೀ ಶ್ರೀನಿವಾಸ ಗೌಡ ಎ ಇವರ ಮುಖಾಂತರ ಜ್ಯಾರಿ.

ಪ್ರತಿ: ತಹಶೀಲ್ದಾರರು ಬೆಳ್ತಂಗಡಿ ತಾಲೂಕು ಇವರಿಗೆ ಸೂಕ್ತ ಕ್ರಮಕ್ಕಾಗಿ.